# ಬಾಲಿವುಡ್ ಬೆಳದಿಂಗಳು!



## ಶಶಿ ಕಪೂರ್
## 1938 - 2017

★ ಜೋಗಿ

ಹಿಂದಿ ಚಿತ್ರರಂಗದ ಏಳು ಕೋಟೆಯಲ್ಲಿ ಕಳೆದ ಏಳು ದಶಕಗಳಿಂದ ದರ್ಬಾರ್ ನಡೆಸುತ್ತಿರುವ 'ಬಾಲಿವುಡ್ ಬಾದ್‌ಶಹಾ' ಪೃಥ್ವಿರಾಜ್ ಕಪೂರ್ ಅವರ ಕುಟುಂಬದ ಸದಸ್ಯರ ಅಭಿನಯ ವೈವಿಧ್ಯಮಯ; ಒಬ್ಬೊಬ್ಬರದೂ ಭಿನ್ನ– ವಿಭಿನ್ನ. ರಾಜ್ ಕಪೂರ್, ಶಮ್ಮಿ ಕಪೂರ್ ಮತ್ತು ಶಶಿ ಕಪೂರ್– ಈ ಮೂವರು ಪುತ್ರರೂ ತಮ್ಮದೇ ಆದ ಶೈಲಿಯ ಅಭಿನಯವನ್ನು ಪ್ರಸ್ತುತ ಪಡಿಸಿದವರು. ರಾಜ್‌ರದ್ದು ಸೀರಿಯಸ್ ಪಾತ್ರ, ಆದರೆ ಅದಕ್ಕೆ ಹಾಸ್ಯದ ಕಚಗುಳಿ, ಚಾರ್ಲಿ ಚಾಪ್ಲಿನ್ ನೆರಳು. ಶಮ್ಮಿ ಕಪೂರ್‌ರದ್ದು ಅಂಗಾಂಗಗಳನ್ನೆಲ್ಲಾ ಸಿಕ್ಕಾಬಟ್ಟೆ ಬಳಸಿಕೊಳ್ಳುವ ಕುಣಿತ, ಹಾಡಿನ ಅಬ್ಬರ ಬೆಳ್ಳಿತೆರೆಗೆ ಡಿಕ್ಕಿ ಹೊಡೆದು ಅಪಘಾತ ಮಾಡದೇ ರಂಜಿಸಿದ ನಟ.

ಮೂರನೆ ಮಗ ಶಶಿಕಪೂರ್ ಮಾತ್ರ ಹಾಲಿವುಡ್ ಕಳೆಯ ಭಾರತೀಯ ನಟ. ಈತನ ಅಭಿನಯ, ಆಕರ್ಷಕ ನೃತ್ಯ ಶೈಲಿ, ತಣ್ಣನೆಯ ಡೈಲಾಗ್ ಶೈಲಿ ಈತನಿಗೆ ತನ್ನದೇ ಆದ ಅಭಿಮಾನಿಗಳ ದೊಡ್ಡ ಗುಂಪೊಂದನ್ನು ಸೃಷ್ಟಿಸಿತು. ಬಾಲಿವುಡ್‌ನ ಬಾನಂಗಳದಲ್ಲಿ ಹುಣ್ಣಿಮೆಯ ಚಂದ್ರನಂತೆ ಬೆಳದಿಂಗಳನ್ನು ತಂದವನೀತ. ಡಿ.4ರಂದು ಇಹಲೋಕ ತ್ಯಜಿಸಿ, ಮೇಘದ ಮರೆಗೆ ಜಾರಿ ಆಕಾಶದಲ್ಲೊಂದು ತಾರೆಯಾಗಿಬಿಟ್ಟ. ಲಕ್ಷಾಂತರ ಸಿನಿಮಾಪ್ರಿಯರ ಹೃದಯ ಸಾಮ್ರಾಜ್ಯದಲ್ಲಿ  ಶಶಿ ಕಪೂರ್‌ಗೆ ಒಂದು ಶಾಶ್ವತ ಸ್ಥಾನವಿದೆ.

'ಮೇಘಾ ಛಾಯೆ ಆಧಿ ರಾತ್, ಬೈರನ್ ಬನ್‌ಗಯಿ ನಿಂದಿಯಾ, ಬತಾದೇ ಮೈ ಕ್ಯಾ ಕರೂಂ, ಮೇಘಾ ಛಾಯೆ,  
ರೂಠ್ ಗಯಿ ರೇ, ಸಪ್ನೇ ಸಾರೆ ಟೂಟ್ ಗಯಿ ರೆ ಆಶಾ,  
ನೈನ್ ಬಹೇರೆ ಗಂಗಾಮಯ್ಯಾ, ಫಿರ್ ಭೀ ಮನ್ ಹೈ ಪ್ಯಾಸಾ,  
ಕಿಸೆ ಕಹ್ಣೂ ರೆ ಮನ್ ಕಿ ಬಾತ್..'

—ಶಶಿಕಪೂರ್ ನಟಿಸಿದ ಸಿನಿಮಾಗಳಲ್ಲಿ ಬಹುತೇಕ ಹಾಡುಗಳು ಮಾಧುರ್ಯಮಯ; ಅರ್ಥಪೂರ್ಣ ಅದಕ್ಕೆ ಶಶಿಯ ನಟನೆ. ಎರಡೂ ಕೈ ಹಿಂದಕ್ಕೆ ಒಯ್ದು ಆಕರ್ಷಕವಾಗಿ ನರ್ತಿಸುವದು ಅಮೋಘ. ನೋಡುಗರ ಕಣ್ಣಿಗೆ ಹಬ್ಬ. ಬೆಕ್ಕಿನ ಕಣ್ಣಿನ ಸುಂದರಿ 'ರಾಖಿ' ನಾಯಕಿಯಾಗಿದ್ದ "ಶರ್ಮಿಲಿ" ಚಿತ್ರದ ಹಾಡಿದು. ಶಶಿ ಚಿತ್ರಕ್ಕೆ ಗೀತರಚನಕಾರರು, ಸಂಗೀತ ಸಂಯೋಜಕರು ಶ್ರೇಷ್ಠರೇ ಸಿಗುತ್ತಿದ್ದರು. ಗುಲ್ಜಾರ್, ಬರ್ಮನ್‌ರು. ಅದು ಆತನ ಸುದೈವವೂ ಆಗಿತ್ತು.

ಕಪೂರ್ ಮನೆತನ ಮೂಲತಃ ರಂಗಭೂಮಿಯಿಂದ ಬಂದದ್ದು. ಮೂವರೂ ಮಕ್ಕಳಲ್ಲಿ 'ಪೃಥ್ವಿ ಥೇಟರ್ಸ್'ದೊಂದಿಗೆ ಹೆಚ್ಚಿನ ಸಂಪರ್ಕ ಹೊಂದಿದ್ದು ಶಶಿ ಕಪೂರ್ ಮಾತ್ರ. ದೇಶ ವಿದೇಶಗಳಿಗೆ ತಂದೆಯೊಂದಿಗೆ ಪ್ರಯಾಣಿಸುತ್ತಿದ್ದ ಶಶಿ, ಇಂಗ್ಲಿಷ್ ಅದರಲ್ಲೂ ವಿಶೇಷವಾಗಿ ಷೇಕ್ಸ್‌ಪಿಯರ್ ನಾಟಕಗಳಿಗೆ ಮನ ಸೋತವನು. ಹಿಂದಿಯೊಂದಿಗೆ, ಇಂಗ್ಲಿಷ್ ರಂಗಭೂಮಿಗೂ ನೇಪಥ್ಯದ ಕೆಲಸ, ರಂಗದ ಮೇಲೆ ಅಭಿನಯ– ಹೀಗೆ ಎರಡಕ್ಕೂ 'ಸೈ' ಅನ್ನುತ್ತಿದ್ದ ಜಾಯಮಾನ ಶಶಿಯದು. ಹುಟ್ಟಿನಿಂದಲೇ ರಕ್ತಗತವಾಗಿ ಬಂದ ಕಲೆ, ಸುತ್ತಲಿನ ಪರಿಸರ, ಕಲಾರಾಧನೆಯ ವಾತಾವರಣ ಶಶಿಯನ್ನು ಕೈಹಿಡಿದು ನಡೆಸಿಕೊಂಡು ಉತ್ತುಂಗಕ್ಕೆ ತಂದು ನಿಲ್ಲಿಸಿತ್ತು.

ಬಾಲಕನಿದ್ದಾಗಲೇ ಮುಖಕ್ಕೆ ಬಣ್ಣ ಹಚ್ಚಿದ ಶಶಿ, ಕಪೂರ್ ಕುಟುಂಬದಲ್ಲೇ ಹಾಲಿವುಡ್‌ದಲ್ಲಿಯೂ ಮಿಂಚಿದ ಏಕೈಕ ಕಪೂರ! 1967ರಲ್ಲಿ 'ಷೇಕ್ಸ್‌ಪಿಯರ್. ವಲ್ಲಾಹ್, ಎ ಮ್ಯಾಟರ್ ಆಫ್ ಇನೋಸೆನ್ಸ್, 1983ರಲ್ಲಿ 'ಹೀಟ್ ಆಂಡ್ ಡಸ್ಟ್', 1994ರಲ್ಲಿ 'ಇನ್ ಕಸ್ಟಡಿ', 'ಸಿದ್ಧಾರ್ಥ', ಬಾಂಬೆ ಟಾಕೀಸ್' ಮುಂತಾದ ಇಂಗ್ಲಿಷ್ ಚಿತ್ರಗಳಲ್ಲಿ ನಟಿಸಿದ. 'ಹಾಲಿವುಡ್ ಲುಕ್' ಹೊಂದಲು ಶಶಿಗೆ ಚತುರ ಅಭಿನಯ, ಇಂಗ್ಲಿಷ್ ಸಂಭಾಷಣೆಯ ಉಚ್ಚಾರಗಳು 'ಪ್ಲಸ್ ಪಾಯಿಂಟ್'ಗಳಾದವು.

ಮುಂಬೈಯ ಮಾತುಂಗಾದ ಡಾನ್ ಬಾಸ್ಕೊ ಶಾಲೆಯಲ್ಲಿ ಓದುತ್ತಿದ್ದಾಗ ಜಾಣ ವಿದ್ಯಾರ್ಥಿ. ಇಂಗ್ಲಿಷ್ ಸಾಹಿತ್ಯದಲ್ಲಿ ಆಸಕ್ತಿ. ಪ್ರಥ್ವಿ ಥೇಟರ್ಸ್ 1956ರಲ್ಲಿ ಕಲಕತ್ತಾ ಕ್ಯಾಂಪ್ (ಈಗಿನ ಕೋಲ್ಕತಾ, ಶಶಿ ಜನಿಸಿದ ಊರೂ ಹೌದು) ಹಾಕಿತ್ತು. ಆಗ ಅಲ್ಲಿಯೇ ಜಿಯೋಫ್ರೆಯ್ ಕೆಂಡಾಲ್ ನೇತೃತ್ವದ ಷೇಕ್ಸ್‌ಪಿಯರನ್ ಇಂಗ್ಲಿಷ್ ನಾಟಕ ಕಂಪನಿಯೂ ಕ್ಯಾಂಪ್ ಹಾಕಿತ್ತು. ಶಶಿಗೆ ಅಲ್ಲಿಯೇ ಆ ಕಂಪನಿಯ ಮಾಲೀಕರ ಮಗಳು, ನಟಿ ಜೆನ್ನಿಫರ್ ಕೆಂಡಾಲ್‌ಳ ಭೆಟ್ಟಿ ಆಯಿತು. ಮೇಲಿಂದ ಮೇಲೆ ಭೆಟ್ಟಿ,  ರಂಗಭೂಮಿ ಬಗ್ಗೆ ಚರ್ಚೆ, ಸಂವಾದ ಆರಂಭವಾದದ್ದು ಆ ಬಳಿಕ ಪ್ರೀತಿಯಾಗಿ ಪರಿವರ್ತನೆ ಹೊಂದಿತು. ಮದುವೆ ಆಗಲೇಬೇಕೆಂದು ಪರಸ್ಪರ ನಿಶ್ಚಯಿಸಿದರು. ಈ ಮದುವೆಗೆ ಕಪೂರ್ ಮತ್ತು ಕೆಂಡಾಲ್ ಎರಡೂ ಕುಟುಂಬಗಳ ಹಿರಿಯರ ವಿರೋಧವಿತ್ತು. ಆದರೆ ಅತ್ತಿಗೆ (ಶಮ್ಮಿ ಕಪೂರ್ ಪತ್ನಿ) ಗೀತಾ ಬಾಲಿ ಬೆಂಬಲಿಸಿದರು. ಹಾಗೂ ಹೀಗೂ 1956ರಲ್ಲಿ ಇಬ್ಬರೂ ಬಾಳಸಂಗಾತಿಗಳಾದರು. ಇಂಗ್ಲಿಷ್ ನಟಿ ಫೆಲಿಸಿಟಿ ಕೆಂಡಾಲ್, ಶಶಿಯ ನಾದಿನಿ. 'ವಲ್ಲಾಹ್' ಇಂಗ್ಲಿಷ್ ಚಿತ್ರದಲ್ಲಿ ಈಕೆಯೇ ಶಶಿಗೆ ನಾಯಕಿ. ಈ ದಂಪತಿ 'ಮರ್ಚಂಟ್ ಐವರಿ' ನಿರ್ಮಿಸಿದ ಇಂಗ್ಲಿಷ್ ಚಿತ್ರಗಳಲ್ಲಿ ಅಭಿನಯಿಸಿದರು. 1978 ನವೆಂಬರ್ 5ರಂದು ಶಶಿ ಮತ್ತು ಜೆನಿ ಮುಂಬಯಿಯಲ್ಲಿ 'ಪೃಥ್ವಿ ಥೇಟರ್'ಅನ್ನು ಮರು ಸ್ಥಾಪಿಸಿದರು.

–76ನೇ ಪುಟಕ್ಕೆ